ನೂರಾರು ಜನ ಬರ್ತಾರೆ. ಅಲ್ಲಿ ಕೊಲೆ, ಸುಲಿಗೆ ಮಾಡಿ ಇಲ್ಲಿಗೆ ಬಂದು ಅಮಾಯಕರಂತೆ ನೆಂಟರ, ಪರಿಚಿತರ ಮನೆಗಳಲ್ಲಿ ಇರ್ತಾರೆ. ಕೆಲವರು ಕಾರಣವೇ ಇಲ್ಲದೆ ಬರ್ತಾರೆ. ಅನುಮಾನ ಬಂದರೆ ವಿಚಾರಿಸಬಹುದು. ಹತ್ತಿ, ಮೆಣಸಿನಕಾಯಿ ಮಾರಾಟಕ್ಕೆ ಅಂತ ರೈತರು, ಖರೀದಿಗೆ ಅಂತ ವ್ಯಾಪಾರಿಗಳು ಬರ್ತಾರೆ. ಅವರನ್ನೆಲ್ಲ ವಿಚಾರಿಸಲು ಸಾಧ್ಯವಿಲ್ಲ. ಏನು ಮಾಡಬೇಕು ಅನ್ನೋದು ಗೊತ್ತಾಗದೆ ಚಡಪಡಿಸಿದರು.

ಮತ್ತೊಂದು ವೀಕೆಂಡ್ ಮೀಟಿಂಗ್ ಬಂತು. ಎಸ್‌ಪಿ ಸಾಹೇಬರಿಗೆ ಏನು ಉತ್ತರ ಹೇಳಬೇಕು ಎನ್ನುವುದು ಯಾರಿಗೂ ಗೊತ್ತೇ ಆಗಲಿಲ್ಲ. ಹಳೆಯ ಕೇಸುಗಳ ತನಿಖೆಗೆಂದು ಪಕ್ಕದ ರಾಜ್ಯಕ್ಕೆ ಹೋದವರೂ ಬರಲಿಲ್ಲ. ಪತ್ರಿಕೆಗಳಲ್ಲಿ, ಟೀವಿ ಚಾನಲ್‌ಗಳಲ್ಲಿ ಹೇಳಿಕೊಳ್ಳುವಂತಹ ಸುದ್ದಿಗಳಿಲ್ಲ. ಸಿಟಿಯಲ್ಲಿ ಒಂದು ವಾರ ಏನೂ ನಡೆಯಲಿಲ್ಲ. ಆದರೂ ಏನೋ ಆತಂಕ. ಇದ್ದಕ್ಕಿದ್ದ ಹಾಗೇ ಏನಾದರೂ ಆಗಬಹುದು ಅನ್ನುವ ಭಯ.

★★★

ರಾಣಿ ಚೌಲ್ಟ್ರಿಯಿಂದ ಅರ್ಧ ಕಿಲೋಮೀಟರು ದೂರದಲ್ಲಿ ಕಟ್ಟುತ್ತಿರುವ ಏಳಂತಸ್ತಿನ ಕಟ್ಟಡದಲ್ಲಿ ಲಕ್ಷ್ಮಣನಿಗೆ ಕೆಲಸ ಸಿಕ್ಕಿತು. ಅದು ಶಾಪಿಂಗ್ ಮಾಲ್ ಅಂತೆ. ಮಾಲೀಕರು ಹೈದರಾಬಾದಿನವರು. ಕಂಟ್ರಾಕ್ಟರು ರಾಯದುರ್ಗದವರಂತೆ. ವೆಂಕಟಗಿರಿ ಬಯಸಿದಂತೆ ಎರ್ರಿತಾತ ಕಾಲೋನಿಯಲ್ಲಿ ಒಂದು ಔಟ್‌ಹೌಸಿನಂತಹ ಹಳೇ ಮನೆ ಬಾಡಿಗೆಗೆ ಸಿಕ್ಕಿತು. ಅದರ ಮಾಲೀಕರು ಉರವಕೊಂಡದವರು. ಬಾಡಿಗೆ ಸಾವಿರದೈನೂರು. ಹತ್ತು ಸಾವಿರ ಅಡ್ವಾನ್ಸ್ ಕೊಡಿ ಸಾಕು. ಮನೆಯನ್ನು ಸಾರಿಸಿ, ಗುಡಿಸಿ ನೀಟಾಗಿ ಇಟ್ಟುಕೊಳ್ಳಬೇಕು. ನಮ್ಮ ಮಗನಿಗೆ ರೇಣಿಗುಂಟದಲ್ಲಿ ಕೆಲಸ ಸಿಕ್ಕಿದೆ. ಮುಂದಿನ ವಾರ ನಾವು ಅಲ್ಲಿಗೇ ಶೀಫ್ಟ್ ಆಗ್ತೀವಿ. ಆ ಮೇಲೆ ನಾವಿರುವ ಈ ಮನೆಯ ಕೀ ನಿಮಗೆ ಕೊಟ್ಟು ಹೋಗ್ತೀವಿ. ವಾರಕ್ಕೊಮ್ಮೆ ಬಾಗಿಲು ತೆಗೆದು ಕ್ಲೀನು ಮಾಡಿಸಿ. ನಾರಾಯಣಪೇಟೆಯಲ್ಲಿರೋ ನನ್ನ ತಮ್ಮನನ್ನು ನಿಮಗೆ ಪರಿಚಯ ಮಾಡಿಕೊಡ್ತೀನಿ. ಬಾಡಿಗೆ ಅವನಿಗೆ ಕೊಡಿ. ಮೂರು ತಿಂಗಳಿಗೊಮ್ಮೆ ನಾನೇ ಬಂದು ಹೋಗ್ತೀನಿ ಅಂತ ಓನರ್ ಮುದುಕ ಹೇಳಿದರಂತೆ.

> ಅಯ್ಯ ಹಾಗೇ ಕಣ್ಣು ಮುಚ್ಚಿ ಮಲಗಿಕೊಂಡರು. ನಂದ್ಯಾಲದ ಮಿಲ್ ಹೊಡೆದಾಟದಲ್ಲಿ, ಬಾಂಬ್ ಬ್ಲಾಸ್ಟ್‌ನಲ್ಲಿ ಎಷ್ಟು ಜನ ಸತ್ತರು. ಬಚಾವಾದವರು ಹೇಗಿದ್ದಾರೆ, ಎಲ್ಲಿದ್ದಾರೆ ಅನ್ನೋ ಚಿಂತೆ. ರೆಡ್ಡಿ ಏನನ್ನೋ ತನ್ನಿಂದ ಮುಚ್ಚಿಡುತ್ತಿದ್ದಾನೆ ಅನ್ನೋ ಅನುಮಾನ ಅವರಿಗೆ. ಸದಾ ನಂದ್ಯಾಲ ಘಟನೆ ಕುರಿತೇ ಯೋಚಿಸುತ್ತಿದ್ದರು.

ಮನೇನ ಮಾರಬೇಕು ಅಂತ ಇದ್ದರಂತೆ. ಸರಿಯಾದ ರೇಟು ಸಿಗಲಿಲ್ಲವಂತೆ. ಬೇಕಿದ್ದರೆ ನೀವೇ ತಗೊಬಹುದು ಅಂತಲೂ ಹೇಳಿದರು ಅಂತ ಮುತ್ಯಾಲ ಹೇಳಿದ.

ಮನೆಯಲ್ಲಿ ಸಾಯಿಲಕ್ಷ್ಮಿ ಮತ್ತು ಮುತ್ಯಾಲ ಇರುವುದೆಂದು ನಿರ್ಧಾರ ಆಯಿತು. ಲಕ್ಷ್ಮಣ ಕೆಲಸ

